**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1145/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ವೆಂಕಟೇಶ್** | ಪ್ರಾಸಾಃ 1 |
| ತಂದೆಯ/ಗಂಡನ ಹೆಸರು | | ಲೇಟ್ ಶಂಕರೇಗೌಡ | ಚಾಸಾಃ 3 |
| ವಯಸ್ಸು | | 61 ವರ್ಷ | |
| ಕೆಲಸ | | ನಿವೃತ್ತ ಅಬಕಾರಿ ಸಬ್ ಇನ್ಸ್ ಪೆಕ್ಟರ್ | ಸಾ ಪ್ರ ಬೋ |
| ವಾಸ | | ನಂಜನಗೂಡು | ದಿಃ 11/10/2022 |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದಃ**

ನಾನು ದಿನಾಂಕ 20.11.2012 ರಿಂದ 07.08.2014 ರವರೆಗೆ ಅಬಕಾರಿ ಉಪನಿರೀಕ್ಷಕರಾಗಿ ಅಬಕಾರಿ ಅಧೀಕ್ಷಕರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 27.06.2016 ರಂದು ಮಧ್ಯಾಹ್ನ 2.15 ಗಂಟೆ ಸಮಯದಲ್ಲಿ ವಾಹನ ಸಂಖ್ಯೆ ಕೆಎ-03-ಜಡ್-4792 ಕ್ವಾಲಿಸ್ ವಾಹನದಲ್ಲಿ ಅಬಕಾರಿ ನಿರೀಕ್ಷಕರಾದ ಚಾಸಾ-1 ರವರು ನನ್ನನ್ನು ಮತ್ತು ಚಾಸಾ-2 ಮತ್ತು 4 ರವರನ್ನು ಸರ್ಕಾರಿ ಕೆಲಸದ ನಿಮಿತ್ತ ಬಿ.ಎ.ಎಸ್. ಫ್ಯಾಕ್ಟರಿಯ ಒಳಗೆ ಇರುವ ನಮ್ಮ ಕಛೇರಿಗೆ ಹೋಗಲು ಮುಖ್ಯ ಗೇಟ್ ಬಳಿ ಹೋದಾಗ ಕೆಲವು ಹೆಂಗಸರು ಮತ್ತು ಗಂಡಸರು ಅಕ್ರಮ ಗುಂಪು ಕಟ್ಟಿಕೊಂಡು ಗೇಟ್ ನಲ್ಲಿ ಅಡ್ಡವಾಗಿ ನಿಂತಿದ್ದರು. ಅವರುಗಳಿಗೆ ನಾವು ಸರ್ಕಾರಿ ಕೆಲಸಕ್ಕೆ ಹೋಗುವುದಕ್ಕೆ ಇದೆ ಎಂದು ದಾರಿ ಬಿಡುವಂತೆ ಕೇಳಿದಾಗ ಅವರುಗಳು ನಾವು ಒಳಗೆ ಹೋಗಲು ಬಿಡುವುದಿಲ್ಲವೆಂದು ಕೂಗಾಡಿ ನಮ್ಮ ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿರುತ್ತಾರೆ. ನಮ್ಮೊಂದಿಗೆ ಪೊಲೀಸ್ ಸಿಬ್ಬಂದಿ ಕೂಡ ಇದ್ದರು. ಪೊಲೀಸ್ ಸಿಬ್ಬಂದಿಯವರು ಅಕ್ರಮವಾಗಿ ಗುಂಪು ಕಟ್ಟಿಕೊಂಡಿದ್ದವರಿಗೆ ಸರ್ಕಾರಿ ಅಧಿಕಾರಿಗಳಿಗೆ ದಾರಿ ನೀಡಿ ಎಂದು ಹೇಳಿದರು ಕೂಡ ಅವರು ನಮಗೆ ದಾರಿ ನೀಡಲಿಲ್ಲ. ಈ ಬಗ್ಗೆ ಚಾಸಾ-1 ದೂರು ನೀಡಿರುತ್ತಾರೆ.

ದಿನಾಂಕ 28.06.2014 ರಂದು ಚಾಸಾ-2 ರವರು ಕೃತ್ಯ ನಡೆದ ಸ್ಥಳವನ್ನು ಪೊಲೀಸರಿಗೆ ತೋರಿಸಿದ ಮೇರೆಗೆ ಅವರುಗಳು ನನ್ನ ಮತ್ತು ಚಾಸಾ-2 ಮತ್ತು 4 ರವರ ಸಮಕ್ಷಮ ಬೆಳಗ್ಗೆ 11.00 ರಿಂದ 1.45 ರವರೆಗೆ ಪಂಚನಾಮೆ ಜರುಗಿಸಿರುತ್ತಾರೆ. ಈಗ ನನಗೆ ತೋರಿಸಿದ ದಾಖಲೆಯು ಪಂಚನಾಮೆಯಾಗಿದ್ದು ಅದರಲ್ಲಿ ನನ್ನ ರುಜು ಇರುತ್ತದೆ. ಪಂಚನಾಮೆಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಮ್ಮ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ವಿಚಾರದಲ್ಲಿ ನಿಪಿ-1 ಮಹಜರ್ ಮಾಡಿರುತ್ತಾರೆ.

ನಮ್ಮ  ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಅವರುಗಳೇ ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದು ಎಂದು ನುಡಿದಿರುತ್ತಾರೆ. 1 ರಿಂದ 7 ಮತ್ತು 25 ನೇ ಆರೋಪಿತರು  ಗೈರು ಹಾಜರು ಇದ್ದು, ಆರೋಪಿತರ ಗುರುತಿಸುವಿಕೆಯ ಬಗ್ಗೆ ಆರೋಪಿತರ ಪರ ವಕೀಲರು ತಕರಾರು ಇರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿತರು ತಮ್ಮನ್ನು ಕೆಲಸದಿಂದ ತೆಗೆದು ಹಾಕಿದ್ದಕ್ಕೆ, ಮರುನೇಮಕ ಮಾಡಿಕೊಳ್ಳುವಂತೆ ಪ್ರತಿಭಟನೆ ಮಾಡುತ್ತಿದ್ದರು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಮಾನ್ಯ  ಎ.ಪಿ.ಪಿ.ಯವರಿಂದಃ</u>**

ಸ್ಥಳದಲ್ಲಿ ಇದ್ದ 1 ರಿಂದ 7 ನೇ ಆರೋಪಿತರು ಇತರೆ ಆರೋಪಿತರಿಗೆ ಜಗಳ ಮಾಡುವಂತೆ ಕುಮ್ಮಕ್ಕು ನೀಡುತ್ತಿದ್ದರು ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಆರ್.ಎಂ.ಎಸ್.  ಆರೋಪಿತರ ಪರ ವಕೀಲರಿಂದಃ</u>**

ನಾನು ಬಿ.ಎ.ಎಸ್. ಫ್ಯಾಕ್ಟರಿಗೆ 2012 ರಿಂದ ನನ್ನ ಕೆಲಸದ ನಿಮಿತ್ತ ಹೋಗುತ್ತಿದ್ದೆ. ಸದರಿ ಫ್ಯಾಕ್ಟರಿಯಲ್ಲಿ ನಮ್ಮ ಅಬಕಾರಿ ಕಛೇರಿ ಇದೆ. ಅಲ್ಲಿ ಒಟ್ಟು 4 ಜನ ಸಿಬ್ಬಂದಿ ಕೆಲಸ ಮಾಡುತ್ತಾರೆ. ಸದರಿ ಕಛೇರಿಯಲ್ಲಿ ಅಬಕಾರಿ ಅಧೀಕ್ಷಕಾರು , ಅಬಕಾರಿ ನಿರೀಕ್ಷಕರು, ಅಬಕಾರಿ ಉಪನಿರೀಕ್ಷಕರು ಮತ್ತು ಒಬ್ಬ ಅಬಕಾರಿ ರಕ್ಷಕ ಕೆಲಸ ಮಾಡುತ್ತಾರೆ. ಸದರಿ ಸಿಬ್ಬಂದಿಯವರು ಬೆಳಗ್ಗೆ 10.00 ರಿಂದ ಸಂಜೆ 5.30 ರವರೆಗೆ ಕರ್ತವ್ಯ ನಿರ್ವಹಿಸುತ್ತಾರೆ. ಬೆಳಗ್ಗೆ 10.00 ಗಂಟೆಗೆ ಕಛೇರಿಯ ಒಳ ಹೋದರೆ ಪುನಃ ನಾವು ಆಚೆ ಬರುವುದು ಸಂಜೆ 5.30 ಕ್ಕೆ ಎಂದರೆ ಸರಿ. ಘಟನೆ ನಡೆದ ದಿನ ನಾವು ಕಛೇರಿಗೆ ಬೆಳಗ್ಗೆ 10.30 ಕ್ಕೆ ಹೋಗಿದ್ದೆವು ಎಂದರೆ ಸಾಕ್ಷಿಯು ಆರೋಪಿತರು ನಮ್ಮನ್ನು ಕಛೇರಿಗೆ ಹೋಗಲು ಬಿಡಲಿಲ್ಲ ಎಂದು ನುಡಿಯುತ್ತಾರೆ. ಕಾರ್ಖಾನೆಯ ಕಾರ್ಮಿಕರು ಸುಮಾರು 2-3 ದಿನಗಳಿಂದ ಮುಷ್ಕರ ಮಾಡುತ್ತಿದ್ದಾರೆ ಎಂದು ನಮಗೆ ತಿಳಿದಿತ್ತು. ಕಾರ್ಮಿಕರು ತಮ್ಮ ಬೇಡಿಕೆಯ ಈಡೇರಿಕೆಗಾಗಿ ಮುಷ್ಕರ ಮಾಡುತ್ತಿದ್ದರು. ಕಾರ್ಮಿಕರು ಮುಷ್ಕರ ಮಾಡುತ್ತಿರುವ ಬಗ್ಗೆ ನಮಗೆ ತಿಳಿದಿತ್ತು. ಕಾರ್ಖನೆಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಾರೆ ಎಂದು ನಮಗೆ ಗೊತ್ತಿಲ್ಲ.  ಕಾರ್ಖನೆಯಲ್ಲಿ ಎಷ್ಟು ಮಹಿಳಾ ಮತ್ತು ಪುರುಷ ಸಿಬ್ಬಂದಿ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಕಾರ್ಖನೆಯಲ್ಲಿ ಸುಮಾರು 1,500 ಜನ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1,500 ಜನ ಕಾರ್ಮಿಕರು ಎಲ್ಲರು ಮುಷ್ಕರದಲ್ಲಿ ಭಾಗವಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮುಷ್ಕರದಲ್ಲಿ ಮಲ್ಲುಪುರ ಮತ್ತು ಸುತ್ತ ಮುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಮುಷ್ಕರದಲ್ಲಿ

ಯಾರು ಯಾರು ಭಾಗವಹಿಸಿದ್ದರು ಎಂದು ನನಗೆ ಗೊತ್ತಿಲ್ಲ. ಗುಂಪಿನಲ್ಲಿ ಯಾರು ಗಲಾಟೆ ಮಾಡಿದರು ಎಂದು ನನಗೆ ಗೊತ್ತಾಗಲಿಲ್ಲ. ಪೊಲೀಸರ ಮುಂದೆ ನಾನು ನಿಖರವಾಗಿ ಯಾರು ಯಾರು ಗಲಾಟೆ ಮಾಡಿದರು ಎಂದು ಹೇಳಿಲ್ಲ. ನಾನು ಹೇಳುವಂತೆ ಯಾರು ಕೂಡ ನಮ್ಮನ್ನು ಅಡ್ಡಗಟ್ಟಿ ನಮ್ಮ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಕಾರ್ಖನೆಯವರೊಂದಿಗೆ ಶಾಮೀಲಾಗಿ ಆರೋಪಿತರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮನ್ನು ಅಡ್ಡಗಟ್ಟಿದ್ದರು ಮತ್ತು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ನಾನು ಠಾಣೆಯಲ್ಲಿ ರುಜು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**